ಮತ್ತು ರಸ್ತೆಗೆ ಟಾರ್ ಹಾಕಿಸಿಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ.ಚಿಮ್ಮನಕಟ್ಟಿ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ): ಈ ಪ್ರಶ್ನೆ ಮುಖ್ಯಮಂತ್ರಿಗಳ ವ್ಯಾಪ್ತಿಗೆ ಬರುವುದರಿಂದ, ಅವರು ಹೇಳಿರುವ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ನಾನೂ ಕೂಡ ಪ್ರಯತ್ನಿಸುತ್ತೇನೆ.

ಹಾಸನ ಜಿಲ್ಲೆಯ ಶಾಂತಿ ಗ್ರಾಮಕ್ಕೆ 30 ಹಾಸಿಗೆಗಳ ಆಸ್ಪತ್ರೆ ಮಂಜೂರಾತಿ.

285(2925)

ಶ್ರೀ ಹನುಮೇಗೌಡ ಕೆ.ಹೆಚ್.(ಹಾಸನ): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?

ಅ) ಕಳೆದ ಏಳು ವರ್ಷಗಳ ಹಿಂದೆ ಹಾಸನ ಪಧಾನ ಸಭಾ ಕ್ಷೇತ್ರದ ಶಾಂತಿಗ್ರಾಮಕ್ಕೆ 30 ಹಾಸಿಗೆಗಳ ಒಂದು ಆಸ್ಪತ್ರೆಯನ್ನು ಮಂಜೂರು ಮಾಡಿದ್ದು ನಿಜವಲ್ಲವೆ;

ಆ) ಅನಂತರ ಬಂದ ಸರ್ಕಾರ ಈ ಆಸ್ಪತ್ರೆಯನ್ನು ರದ್ದುಪಡಿಸಿ ಹೊಳೇನರಸೀಪುರದ ಕಂಚೇವು ಸ್ಥಳಕ್ಕೆ ಏನಾಕಾರಣ ಸ್ಥಳಾಂತರಿಸಿದ್ದು ನಿಜವಲ್ಲವೆ;

ಇ) ಶಾಂತಿಗ್ರಾಮದ ಸುತ್ತಮುತ್ತ ಸುಮಾರು 15 ಕಿ.ಮೀ. ಮೇಲ್ಪಟ್ಟು ಯಾವ ಆಸ್ಪತ್ರೆಯು ಇಲ್ಲದಿರುವುದರಿಂದ ಸುತ್ತಮುತ್ತ ಬಡರೋಗಿಗಳ ಹಿತದೃಷ್ಟಿಯಿಂದ ಸರ್ಕಾರ 30 ಹಾಸಿಗೆಗಳ ಆಸ್ಪತ್ರೆಯನ್ನು ತಕ್ಷಣ ಮಂಜೂರು ಮಾಡುವುದೆ? (ಏವರ ನೀಡುವುದು)

ಡಾ:ಎ.ಬಿ.ಮಾಲಕರೆಡ್ಡಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಹೌದು.

ಆ) ಹೊಳೆನರಸೀಪುರ ತಾಲ್ಲೂಕು ದೊಡ್ಡ ಕಂಚೇವು ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವಾಗಿ ಮೇಲ್ದರ್ಜೆಗೇರಿಸಲಾಗಿದೆ.

ಇ) 30 ಹಾಸಿಗೆಗಳ ಆಸ್ಪತ್ರೆಯ ಮಂಜೂರಾತಿಗೆ ಅವಶ್ಯಕವಾದ ಜನಸಂಖ್ಯೆ ಮತ್ತು ಅನುದಾನದ ಲಭ್ಯತೆಯ ಬಗ್ಗೆ ಪರಿಶೀಲಿಸಲಾಗುತ್ತಿದೆ.

ಶ್ರೀ ಕೆ.ಹೆಚ್.ಹನುಮೇಗೌಡ: ಮಾನ್ಯ ಅಧ್ಯಕ್ಷರೇ, ಕಳೆದ ಬಾರಿ ನಾನು ಆ ಕಡೆ ಕುಳಿತಿದ್ದೆ. ರಾಮಲಿಂಗಾರೆಡ್ಡಿಯವರು ಆರೋಗ್ಯ ಸಚಿವರಾಗಿದ್ದರು. ಶಾಂತಿ ಗ್ರಾಮದ ಸುತ್ತ ಮುತ್ತ 15 ಕಿ.ಮೀ. ವ್ಯಾಪ್ತಿಯಲ್ಲಿ ಒಂದೂ ಆಸ್ಪತ್ರೆಯಿಲ್ಲದೆ. ಅದು ಬೆಂಗಾಡು

ಪ್ರದೇಶವಾಗಿದ್ದು, ಬಡವರಿಗೆ ತೊಂದರೆಯಾಗುತ್ತದೆಂದು ಹೇಳಿದ ಮೇಲೆ, ರೆಪ್ಪೆಸಂಟೇಷನ್ ತೆಗೆದುಕೊಂಡು, ಎನ್‌ಕ್ವೈರಿ ಮಾಡಿ, ಶಾಂತಿ ಗ್ರಾಮಕ್ಕೆ 30 ಹಾಸಿಗೆಗಳ ಆಸ್ಪತ್ರೆಯನ್ನು ಮಂಜೂರು ಮಾಡಿದ್ದರು. ನಂತರ, ನಾನು ಚುನಾವಣೆಯಲ್ಲಿ ಸೋತೆ, ಮುಂದಿನ ಸರ್ಕಾರ ಅಧಿಕಾರಕ್ಕೆ ಬಂತು. ಆ ಸರ್ಕಾರ ಅಧಿಕಾರಕ್ಕೆ ಬಂದಾಗ, ಆ ಆಸ್ಪತ್ರೆಯನ್ನು ಹೊಳೇನರಸೀಪುರದ ಕಂಚೀವು ಸ್ಥಳಕ್ಕೆ ವರ್ಗಾಯಿಸಿರುವುದು ನಿಜವೇ ಎಂದು ಪ್ರಶ್ನೆ ಕೇಳಿದರೆ, ಅದನ್ನು ಅಪ್‌ಗ್ರೇಡ್ ಮಾಡಿದ್ದೇವೆಂದು ಹೇಳಿದ್ದಾರೆ. ಶಾಂತಿ ಗ್ರಾಮಕ್ಕೆ ಮಂಜೂರಾದ ಆಸ್ಪತ್ರೆಯನ್ನು ನಂತರ ಬಂದ ಸರ್ಕಾರ ಎಲ್ಲಿಗೆ ಮಂಜೂರು ಮಾಡಿತು?

ಡಾ: ಎ.ಬಿ.ಮಾಲಕರೆಡ್ಡಿ: ಶಾಂತಿ ಗ್ರಾಮಕ್ಕೆ ಮಂಜೂರು ಮಾಡಿದ ಆಸ್ಪತ್ರೆಯನ್ನು ದೊಡ್ಡಕಂಚೀವು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಿದರು.

ಶ್ರೀ ಕೆ.ಹೆಚ್.ಹನುಮೇಗೌಡ: ಒಂದು ಸರ್ಕಾರ ಏನೇ ಚಿಂತನೆ ಉಪಯೋಗಿಸಿ, ಮಾಹಿತಿ ತರಿಸಿಕೊಂಡು, ಅವಶ್ಯಕತೆ ಇದೆ ಎಂದು ತೀರ್ಮಾನಿಸಿದ ಮೇಲೆ, ಅನಂತರ ಅಧಿಕಾರಕ್ಕೆ ಬಂದ ಸರ್ಕಾರ ಅದನ್ನು ತೆಗೆದು ಬೇರೆ ಕಡೆ ವರ್ಗಾಯಿಸಬೇಕಾದರೆ ಅದಕ್ಕೆ ಕಾರಣಗಳೇನು?

ಡಾ: ಎ.ಬಿ.ಮಾಲಕರೆಡ್ಡಿ: 1994ರಲ್ಲಿ ಶ್ರೀ ರಾಮಲಿಂಗಾರೆಡ್ಡಿಯವರು ಆರೋಗ್ಯಮಂತ್ರಿಯಾಗಿರಲಿಲ್ಲ. ನಾನೇ ಆರೋಗ್ಯ ಮಂತ್ರಿಯಾಗಿದ್ದೆ.

ಶ್ರೀ ಕೆ.ಹೆಚ್.ಹನುಮೇಗೌಡ: ಆ ರೀತಿ ಹೇಳಿದ್ದರೆ, ಸಾರಿ.

ಡಾ: ಎ.ಬಿ.ಮಾಲಕರೆಡ್ಡಿ: ಆಗಿನ ಸರ್ಕಾರ 11 ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿತ್ತು. ಆಗ ನಾನೇ ಆರೋಗ್ಯ ಸಚಿವನಾಗಿದ್ದೆ. ಆಮೇಲೆ ಬಂದ ಸರ್ಕಾರ 1995ರ ಮಾರ್ಚ್ ತಿಂಗಳಲ್ಲಿ ಸಂಪೂರ್ಣವಾಗಿ ಅದನ್ನು ರದ್ದುಪಡಿಸಿ, ಬೇರೆ ಬೇರೆ ಸ್ಥಳಗಳಿಗೆ ಸಮುದಾಯ ಆರೋಗ್ಯ ಕೇಂದ್ರಗಳನ್ನು ಮಂಜೂರು ಮಾಡಿತು. ಅದರಲ್ಲಿ ತಮ್ಮ ಶಾಂತಿಗ್ರಾಮವೂ ಸೇರಿತ್ತು. ಹೊಳೇನರಸೀಪುರದ ದೊಡ್ಡಕಂಚೀವು ಗ್ರಾಮಕ್ಕೆ ಆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಕೊಟ್ಟು, ಅದನ್ನು ಮೇಲ್ದರ್ಜೆಗೇರಿಸಲಾಯಿತು. ಅದನ್ನು ಯಾವ ಕಾರಣಕ್ಕಾಗಿ, ಈ ರೀತಿ ಮಾಡಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಆಗ ಸರ್ಕಾರದ ಮುಖ್ಯಸ್ಥರು ಯಾರಿದ್ದರು, ಆರೋಗ್ಯ ಸಚಿವರು ಯಾರಿದ್ದರೆಂಬುದು ತಮಗೇ ಗೊತ್ತಿದೆ. ಈಗ ನಾನು ಹೇಳುವುದಿಲ್ಲ.

ಶ್ರೀ ಕೆ.ಹೆಚ್.ಹನುಮೇಗೌಡ: ಇಂಥ ಘನಕಾರ್ಯ ಮಾಡಿದ ಮುಖ್ಯ ಮಂತ್ರಿ ಯಾರು ಎಂಬುದನ್ನು ನೀವು ಹೇಳಬೇಕು. ಆ ಹೆಸರನ್ನು ತಿಳಿದುಕೊಳ್ಳುವ ಹಕ್ಕು ನನಗೆ, ನಮ್ಮ ಜನತೆಗೆ, ಹಾಗೂ ಇಡೀ ರಾಜ್ಯಕ್ಕೆ ಇದೆ. ಯಾರು ಅಸಹಾಯಕ ರೈತರಿಗೆ

ಏನಾಕಾರಣ ತೊಂದರೆ ಕೊಡುತ್ತಾರೆ, ದ್ರೋಹ ಮಾಡುತ್ತಾರೆ, ಅವರ ಪ್ರತಿಯೊಬ್ಬರ ನಿಟ್ಟುಸಿರು ಸಂಬಂಧಪಟ್ಟವರ ಮೇಲೆ ಆಟಂಬಾಂಬ್ ಆಗಿ ತಗುಲುತ್ತದೆಂದು ನಾನು ಎಷ್ಟೋ ಸಾರಿ ಸದನದಲ್ಲಿ ಹೇಳಿದ್ದೇನೆ, ಈಗಲೂ ಹೇಳುತ್ತಿದ್ದೇನೆ. ಆ ಮಹಾಪುರುಷರಾರು?

ಡಾ: ಎ.ಬಿ.ಮಾಲಕರೆಡ್ಡಿ: 1995ರ ಮಾರ್ಚ್ ತಿಂಗಳಲ್ಲಿ ಮುಖ್ಯಮಂತ್ರಿಯಾಗಿದ್ದವರಾರೆಂಬುದು ಅವರಿಗೆ ಗೊತ್ತಿದೆ. ನಾನೇಕೆ ಹೇಳಬೇಕು.

ಶ್ರೀ ಕೆ.ಹೆಚ್.ಹನುಮೇಗೌಡ: ತಾವು ಹೇಳಬೇಕು. ಏಕೆ ಹೇಳಬಾರದು? ಆಗ ಯಾರು ಮುಖ್ಯಮಂತ್ರಿಗಳಾಗಿದ್ದರೆಂಬುದನ್ನು ಹೇಳಿ. ಅದರಲ್ಲಿ ತಪ್ಪೇನೂ ಇಲ್ಲ. ನಿಮಗೆ ಅವರ ದಾಕ್ಷಿಣ್ಯವಿಲ್ಲ. ಹೆಸರು ಹೇಳಿ, ಇಂಥಿಂಥ ಉತ್ತಮವಾದ ಕಾರ್ಯ ಮಾಡಿದ್ದಾರೆಂದು ದೇಶಕ್ಕೆ ಗೊತ್ತಾಗಲಿ. ಆ ಗ್ರಾಮದ 15 ಕಿ.ಮೀ. ಸುತ್ತುಮುತ್ತಲು ಒಂದೂ ಆಸ್ಪತ್ರೆಯಿಲ್ಲ. ಆ ಜನರು ಎಷ್ಟು ಕಣ್ಣೀರು ಹಾಕುತ್ತಿದ್ದಾರೆ. 15-20 ಕಿ.ಮೀ. ದೂರ ಹೋಗಲು ಆಗದೆ ಗರ್ಭಿಣಿ ಹೆಂಗಸರು ಸತ್ತಿದ್ದಾರೆ. ಅಂತಹ ತೊಂದರೆ ಆಗಿದೆ. ಇವೆಲ್ಲವನ್ನೂ ಗಮನಕ್ಕೆ ತಂದ ಮೇಲೆ ನೀವು ಆಸ್ಪತ್ರೆಯನ್ನು ಮಂಜೂರು ಮಾಡಿದ್ದು. ನಂತರ, ಅದನ್ನು ವಜಾ ಮಾಡಲು ಕಾರಣ ಗೊತ್ತಿಲ್ಲವೆನ್ನುತ್ತೀರಿ. ಹೆಸರು ಹೇಳುವುದಕ್ಕೇನು ನಿಮಗೆ ತೊಂದರೆ?

ಅಧ್ಯಕ್ಷರು: ಅಲ್ಲಿ ಇನ್ನೊಂದು ಆಸ್ಪತ್ರೆ ತೆರೆಯುವ ಏರ್ಪಾಡು ಮಾಡಿ.

ಶ್ರೀ ಡಿ.ಪಿ.ಸದಾನಂದಗೌಡ: ಕೇವಲ ರಾಜಕೀಯ ಹಿತಾಸಕ್ತಿಗಳಿಗಾಗಿ ಇಂಥ ಒಳ್ಳೆಯ ಕಾರ್ಯಗಳು ವ್ಯತ್ಯಾಸವಾಗಬಾರದು, ಬದಲಾವಣೆಯಾಗಬಾರದು, ಈ ಮೆಸೇಜ್ ಇಡೀ ರಾಜ್ಯಕ್ಕೆ ಮತ್ತು ಎಲ್ಲಾ ರಾಜಕಾರಣಿಗಳಿಗೆ ಹೋಗಬೇಕೆಂಬುದು ಅವರ ಮೂಲ ಉದ್ದೇಶ.

ಡಾ: ಎ.ಬಿ.ಮಾಲಕರೆಡ್ಡಿ: ಪಟ್ಟಣವನ್ನು ಹೊರತುಪಡಿಸಿ, ಹಾಸನ ತಾಲ್ಲೂಕಿನ ಜನಸಂಖ್ಯೆ 2.2 ಲಕ್ಷ ಇದ್ದು, ಶಾಂತಿ ಗ್ರಾಮಕ್ಕೆ ಇನ್ನೊಂದು ಸಮುದಾಯ ಆರೋಗ್ಯ ಕೇಂದ್ರ ಕೊಡುವ ಸಾಧ್ಯತೆ ಉಂಟು. ನಾನು ಅದನ್ನು ಪರಿಶೀಲಿಸುತ್ತೇನೆ.

ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡಗಳ ಭೂಮಿ ಮಾರಾಟ.

287(3552)

ಶ್ರೀ ಹಾಲಾಡಿ ಶ್ರೀನಿವಾಸ ಶೆಟ್ಟಿ (ಕುಂದಾಪುರ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯಪಟ್ಟು ಉತ್ತರಿಸುವರೆ?